ಪ್ರಜಾ ಪ್ರಗತಿ

ಲಾರ್ಡ್‌ಗಾಗ ಚಿತ್ರದ ಹಾಡು, ಟೀಸರ್ ಬಿಡುಗಡೆ

2027ರ ಫೆಬ್ರುವರಿಯಲ್ಲಿ ಸಿನಿಮಾ ಬಿಡುಗಡೆ



ಕಲ್ಟ್‌ರೋಮ್ಯಾಂಟಿಕ್ ಥ್ರಿಲ್ಲರ್ ಕಥಾ ಹಂದರ ಒಳಗೊಂಡ ಲಾರ್ಡ್‌ಗಾಗ ಚಿತ್ರದ ಟೀಸರ್ ಹಾಗೂ ಹಾಡೊಂದು ಬಿಡುಗಡೆ ಆಗಿದೆ. ಹೌದು ಅದ್ದೂರಿಯಾಗಿ ನಡೆದ ಈ ಕಾರ್ಯಕ್ರಮದಲ್ಲಿ ಕೆ. ಹೇಮಂತ್ ಕುಮಾರ್ ಸಂಗೀತ ಸಂಯೋಜಿಸಿರುವ ಹೈಯಾದೆ ಹಾಡು ಬಿಡುಗಡೆ ಆಗಿದೆ. ಈ ಗೀತೆಯನ್ನು ಡಾ.ವಿ. ನಾಗೇಂದ್ರ ಪ್ರಸಾದ್ ಬರೆದಿದ್ದು, ಪ್ರಣವಂ ಶಶಿ ಹಾಗೂ ಸಂಜನಾ ಕಲ್ಮಂಣಿ ಹಾಡಿದ್ದಾರೆ. ಇದೊಂದು ಸಂಭ್ರಮಾಚರಣೆಯ ಹಾಡಾಗಿದೆ. ರಘು ಮಾಸ್ಟರ್ ನೃತ್ಯ ನಿರ್ದೇಶನ ಮಾಡಿದ್ದಾರೆ. ಸದ್ಯ ಮಾಧ್ಯಮಗಳ ಮುಂದೆ ರಿಲೀಸ್ ಆದ ಈ ಹಾಡು ಎರಡು ವಾರಗಳ ನಂತರ ಸಾಮಾಜಿಕ ಜಾಲತಾಣದಲ್ಲಿ ರಿಲೀಸ್ ಆಗಿ ಪ್ರೇಕ್ಷಕರಿಗೆ ನೋಡಲು, ಕೇಳಲು ಸಿಗಲಿದೆ. ವಿಶೇಷ ಎನ್ನುವಂತೆ ವೇದಿಕೆಯಲ್ಲಿ ಈ ಹಾಡಿಗೆ ಡಿ ಕಂಪನಿ ನೃತ್ಯ ತಂಡ ಡ್ಯಾನ್ಸ್ ಮಾಡುವ ಮೂಲಕ ಬಿಡುಗಡೆ ಮಾಡಲಾಯಿತು. ಒಟ್ಟು ಆರು ಸಾಂಗ್ ಈ ಚಿತ್ರದಲ್ಲಿದ್ದು, ಮೂರು ಜನ ಸಂಗೀತ ಸಂಯೋಜನೆ ಮಾಡಿದ್ದಾರೆ.

ಎರಡು ವರ್ಷದ ಶಮವಿದೆ. ಸದ್ಯ ಪೊಸ್ಟ್ ಪ್ರೊಡಕ್ಷನ್ ಹಂತದಲ್ಲಿ ಚಿತ್ರವಿದೆ. ನಮ್ಮ ಮಾತುಗಳನ್ನು ನಮ್ಮ ದೇಹದ ಪಾರ್ಟ್‌ಗಳೇ ಕೇಳಲ್ಲ. ಬೇರೆಯವರು ಯಾಕೆ ಕೇಳಬೇಕು ಎಂಬುದನ್ನು ಸ್ವಾತಂತ್ರ್ಯ ಅಂಶವನ್ನು ಇಟ್ಟುಕೊಂಡು ಈ ಸಿನಿಮಾ ಮಾಡಲಾಗಿದೆ.ಇದು ಬೇರೆ ತರ ಪ್ರಯತ್ನದ ಚಿತ್ರ. ಸೃಷ್ಟಿಯನ್ನು ಅರ್ಥ ಮಾಡಿಕೊಳ್ಳುವಷ್ಟರಲ್ಲಿ ನಮ್ಮ ಜೀವನ ಕಳೆದು ಹೋಗುತ್ತದೆ ಎಂಬ ಅಂಶವಿದೆ. 2027ರ ಫೆಬ್ರುವರಿನಲ್ಲಿ ಸಿನಿಮಾ ಬಿಡುಗಡೆ ಮಾಡುವ ಯೋಜನೆ ಇದೆ ಎಂದು ಹೇಳಿದರು.

Tumkur Edition
Nov 13, 2026 Page No. 6
Powered by: erelego.com